SC. 155/2020
Additional Charge sheet
Witness PW. 12

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 155/2020
ಹೆಚ್ಚುವರಿ ದೋಷಾರೋಪಣೆ ಪಟ್ಟಿ
ಸಾಕ್ಷಿದಾರರು ಪಿಡಬ್ಲು : 12

| | |
|---|---|
| ಸಾಕ್ಷಿಯ ಹೆಸರು | : ಶ್ರೀಮತಿ. ಸುಲೋಚನಾ .ಎನ್ |
| ಗಂಡನ ಹೆಸರು | : ಶ್ರೀ.ಶ್ರೀನಿವಾಸ .ಎಮ್ |
| ವಯಸ್ಸು | : 39 ವರ್ಷ |
| ಉದ್ಯೋಗ | : ಹಿರಿಯ ವೈಜ್ಞಾನಿಕ ತಜ್ಞರು,SFSL ಕಚೇರಿ ಮಡಿವಾಳ,ಬೆಂಗಳೂರು |
| ವಾಸ್ತವ್ಯ | : ಬೆಂಗಳೂರು. |
| ದಿನಾಂಕ | : 26-02-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(**ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಶ್ರೀ ಇಮ್ರಾನ್ ಪಾಶಾ ಸೈಂಟಿಫೀಕ ಆಫೀಸರ ರವರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಲ್.ದೇವರಮನಿ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.**)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

2014 ರಿಂದ ಈ ದಿನದವರೆಗೆ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ SFSL ಕಚೇರಿ ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 02-04-2020 ರಂದು ಕಿತ್ತೂರು ಪೋಲಿಸ ಠಾಣೆಯ ಅಪರಾಧ ಸಂಖ್ಯೆ 24/2020 ಪ್ರಕರಣಕ್ಕೆ ಸಂಬಂಧಿಸಿದಂತೆ ಠಾಣಾ ಪೇದೆ ನಂಬರ 3689 ಭೀಮಪ್ಪ ಚುಂಚನೂರ ಎನ್ನುವವರು ಈ ಪ್ರಕರಣಕ್ಕೆ ಸಂಬಂಧಿಸಿದ 4 ವಸ್ತುಗಳನ್ನು ರಸಾಯನಿಕ ವಿಭಾಗದ ಸ್ವೀಕೃತಿ ವಿಭಾಗಕ್ಕೆ ನೀಡಿದ್ದರು. ಸ್ವೀಕೃತಿ ವಿಭಾಗದವರು ವಸ್ತುಗಳನ್ನು ಸ್ವೀಕರಿಸಿಕೊಂಡು FSL/CS/398/2020 ರಂತೆ ನೊಂದಣಿ ಮಾಡಿದ್ದರು.

3. ನಮ್ಮ ವಿಭಾಗದ ಉಪನಿರ್ದೇಶಕರ ಮುಖಾಂತರ ವಸ್ತುಗಳನ್ನು ವಿಶ್ಲೇಷಣೆಗಾಗಿ ನಾನು ದಿನಾಂಕಃ 07-01-2021 ರಂದು ಸ್ವೀಕರಿಸಿದ್ದೇನೆ. ನಾನು ಸ್ವೀಕರಿಸಿದ ವಸ್ತುಗಳ ಮೇಲೆ ಇದ್ದ ಸೀಲುಗಳು ಸುಸ್ಥಿತಿಯಲ್ಲಿದ್ದವು ಮತ್ತು ಅವು ಮಾದರಿ ಸೀಲನೊಂದಿಗೆ ಹೊಂದಾಣಿಕೆ ಆಗುತ್ತಿದ್ದವು. ನಾನು ಪರೀಕ್ಷೆಗೆ ಸ್ವೀಕರಿಸಿದ 4 ವಸ್ತುಗಳು ಅಂದರೆ:-

1. ವಸ್ತು ಸಂಖ್ಯೆ-1 ಮಣ್ಣಿನೊಂದಿಗೆ ಮಿಶ್ರಿತವಾಗಿದ್ದ ಮೆಣಸಿನಕಾಯಿ ಪುಡಿ.
2. ವಸ್ತು ಸಂಖ್ಯೆ-2 ಸಾದಾ ಮಣ್ಣು.
3. ವಸ್ತು ಸಂಖ್ಯೆ-3 ಕೆಂಪು ಬಣ್ಣದ ಮೆಣಸಿನಕಾಯಿ ಪುಡಿ.
4. ವಸ್ತು ಸಂಖ್ಯೆ-4 ಎಡಕಣ್ಣಿನ ಮತ್ತು ರೆಪ್ಪೆಯಲ್ಲಿನ ಸ್ವಾಬ(Swab)

ಈ ವಸ್ತುಗಳನ್ನು Thin layer chromatography ಪರೀಕ್ಷೆಗೆ ಒಳಪಡಿಸಿದ್ದೇನೆ ಮತ್ತು UV Spectrophotometric Analysis ನ್ನು

ಮಾಡಿದ್ದೇನೆ. ವಸ್ತು ಸಂಖ್ಯೆ –1 ಮತ್ತು ವಸ್ತು ಸಂಖ್ಯೆ–3 ರಲ್ಲಿ ಮೆಣಸಿನಕಾಯಿ ಪುಡಿ ಇರುವುದು ಕಂಡುಬಂದಿರುತ್ತದೆ. ವಸ್ತು ಸಂಖ್ಯೆ –2 ಮತ್ತು ವಸ್ತು ಸಂಖ್ಯೆ –4 ರಲ್ಲಿ ಮೆಣಸಿನಕಾಯಿ ಪುಡಿ ಇರುವುದು ಕಂಡುಬಂದಿರುವುದಿಲ್ಲ. ನಾನು ವಸ್ತುಗಳನ್ನು ಪರೀಕ್ಷೆ ಮಾಡಿದ ಬಗ್ಗೆ ವರದಿಯನ್ನು ನೀಡಿದ್ದೇನೆ. ವರದಿಯನ್ನು ನಿಪಿ–63 ಎಂದು ಗುರುತಿಸಿದ್ದು, ವರದಿಯು ಮೂರು ಪುಟಗಳಲ್ಲಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–63 [ಎ], ನಿಪಿ–63 [ಬಿ] ಮತ್ತು ನಿಪಿ–63 [ಸಿ] ಎಂದು ಗುರುತಿಸಲಾಯಿತು. ಸ್ಯಾಂಪಲ ಸೀಲನ್ನು ನಿಪಿ–64 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–64 [ಎ] ಎಂದು ಗುರುತಿಸಲಾಯಿತು.

4. ನಾನು ಪರೀಕ್ಷಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ FSL ನಂಬರ 398/2020 ಎಂದು ನಮೂದು ಇರುವ ಸೀಲ ಮತ್ತು ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಮೂರು ಭಾಂಗಿಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿ ಬ್ರೌನ ಬಣ್ಣದ ಪೇಪರನಲ್ಲಿ ಕೆಂಪು ಬಣ್ಣದ ಮೆಣಸಿನಕಾಯಿ ಪುಡಿ ಮಿಶ್ರಿತ ಮಣ್ಣು ಇರುವುದು ಕಂಡು ಬಂದಿರುತ್ತದೆ. ಅದನ್ನು ಈಗಾಗಲೇ ಮು.ಮಾ.16 ಎಂದು ಗುರುತಿಸಲಾಗಿದೆ. ಇನ್ನೊಂದು ಭಾಂಗಿಯಲ್ಲಿರುವ ಸಾದಾ ಮಣ್ಣನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಮು.ಮಾ.25 ಎಂದು ಗುರುತಿಸಲಾಯಿತು. ಇನ್ನೊಂದು ಭಾಂಗಿಯಲ್ಲಿರುವ ಕೆಂಪು ಬಣ್ಣದ ಮೆಣಸಿನಕಾಯಿ ಪುಡಿಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಮು.ಮಾ.26 ಎಂದು ಗುರುತಿಸಲಾಯಿತು. ಪ್ಲಾಸ್ಟಿಕ ಡಬ್ಬದಲ್ಲಿ ಇರಿಸಿರುವ ಕಣ್ಣಿನ ಸ್ವಾಬನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಮು.ಮಾ.27 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ ಆರೋಪಿತರ ಪರವಾಗಿ**

ದಿನಾಂಕಃ 30-03-2020 ರಂದು ಡಿ.ವೈ.ಎಸ್.ಪಿ. ಅವರು ಪ್ರಕರಣದಲ್ಲಿನ ವಸ್ತುಗಳನ್ನು ವಿಶ್ಲೇಷಣೆ ಮಾಡಿ ವರದಿ ನೀಡುವಂತೆ ಮನವಿ ಮಾಡಿದ್ದರು ಎನ್ನುವುದು ಸರಿ. ಕೃತ್ಯ ನಡೆದ ಸ್ಥಳದಿಂದ ಸಂಗ್ರಹಿಸಿದಂತಹ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ಸಂಗ್ರಹಿಸದೇ ಇದ್ದರೆ ಅಂತಹ ವಸ್ತುಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತವೆ ಎನ್ನುವುದು ಸರಿ. ದಿನಾಂಕಃ 28-04-2021 ರಂದು ನಿಪಿ-63 ರ ವರದಿಯನ್ನು ತಯಾರು ಮಾಡಿದ್ದೇನೆ ಎನ್ನುವುದು ಸರಿ.

2. ಕೆಂಪು ಮೆಣಸಿನಕಾಯಿಯಲ್ಲಿ ಸಹ ಬೇರೆ ಬೇರೆ ವಿಧಗಳು ಇವೆ ಎನ್ನುವುದು ಸರಿ. ಮೆಣಸಿನಕಾಯಿ ಪುಡಿಯೊಂದಿಗೆ ಬೇರೆ ವಸ್ತುಗಳು ಅಂದರೆ ಮಣ್ಣು, ಮಣ್ಣಿನ ಧೂಳು ಬೆರತಾಗ ಮೂಲ ಸ್ವರೂಪ ಬದಲಾಗುತ್ತದೆ ಎನ್ನುವುದು ಸರಿಯಲ್ಲ. ವಸ್ತು ಸಂಖ್ಯೆ-1 ರಲ್ಲಿ ಮಣ್ಣು ಮತ್ತು ಮೆಣಸಿನಕಾಯಿ ಪುಡಿಯನ್ನು ನಾನು ಪ್ರತ್ಯೇಕಿಸಿರುವುದಿಲ್ಲ. ವಸ್ತು ಸಂಖ್ಯೆ -1 ಮತ್ತು ವಸ್ತು ಸಂಖ್ಯೆ -3 ರಲ್ಲಿರುವ ಕೆಂಪು ಮೆಣಸಿನಕಾಯಿ ಪುಡಿ ಒಂದೇ ಆಗಿರುತ್ತದೆ ಎಂದು ನಾನು ನಿಪಿ-63 ರಲ್ಲಿ ಬರೆದಿಲ್ಲ ಎನ್ನುವುದು ಸರಿ.

3. ವಸ್ತು ಸಂಖ್ಯೆ -1 ಮತ್ತು 3 ರಲ್ಲಿ ಕೆಂಪು ಮೆಣಸಿನಕಾಯಿ ಪುಡಿ ಇತ್ತು ಎಂದು ತನಿಖಾಧಿಕಾರಿಗಳು ಕಳುಹಿಸಿದ ವರದಿ ಆಧಾರದ ಮೇಲೆ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.